

ನೀಲಕಂಠ (Indian roller)



ಮರದ ಪೊಟರೆಯೊಳಗಿನಿಂದ ಗೂಬೆಯ ಇಣುಕು ನೋಟ
ಚಿತ್ರ: ಎ.ಕೆ. ಭಟ್

ಗುರುತಿಸುವುದರಲ್ಲಿ ಮಾರಣ್ಣ ಚಾಣಾಕ್ಷನಾಗಿದ್ದ. ಯಾವ ಹಕ್ಕಿಗಳು ಯಾವ್ಯಾವ ಮರಗಳಲ್ಲಿ ಗೂಡು ಕಟ್ಟುತ್ತವೆ ಎಂದು ನಿಖರವಾಗಿ ಗುರುತಿಸುತ್ತಿದ್ದ.

## ಪಕ್ಷಿಗಳೇಕೆ ಗೂಡು ಕಟ್ಟುತ್ತವೆ?

ಸಂತಾನಾಭಿವೃದ್ಧಿ ಪ್ರತಿಯೊಂದು ಜೀವಿಯ ಅತಿಮುಖ್ಯ ಘಟ್ಟ. ಹಕ್ಕಿಗಳು ಗೂಡು ಕಟ್ಟುವುದು ಕೂಡ ಸಂತಾನಾಭಿವೃದ್ಧಿಗಾಗಿಯೇ. ಹವಾಮಾನ ವೈಪರೀತ್ಯ ಎದುರಿಸಲು ಈ ಗೂಡು ಸಹಕಾರಿ. ನಿಸರ್ಗದಲ್ಲಿ ಪಕ್ಷಿಸಂಕುಲದ ಹಲವು ಬಗೆಯ ಗೂಡುಗಳನ್ನು ಕಾಣಬಹುದು. ಕೆಲವು ನೆಲದ ಮೇಲೆ ಗೂಡು ಕಟ್ಟುತ್ತವೆ. ನೀರು ಆಶ್ರಿತ ಹಕ್ಕಿಗಳ ತೇಲುವ ಗೂಡು ನೋಡಲು ಚೆಂದ. ಮತ್ತೆ ಕೆಲವು ಪಕ್ಷಿಗಳಿಗೆ ಮರದ ನೈಸರ್ಗಿಕ ಪೊಟರೆಗಳೇ ಬದುಕಿಗೆ ಆಸರೆ.

ಗೂಡು ಅವುಗಳ ನೋವು–ನಲಿವಿನ ಸಂಕೇತ. ಜೊತೆಗೆ, ನಿರ್ಜೀವ ಗೋಲಿಗಳಂತೆ ಕಾಣುವ ಮೊಟ್ಟೆಗಳು ಕಾವು ಪಡೆದು ಜೀವವೊಂದು ಕಣ್ತೆರೆಯುವ ನಿಸರ್ಗದ ಅಚ್ಚರಿಗೆ ಗೂಡು ಸಾಕ್ಷಿಯಾಗುತ್ತದೆ. ಅದು ಮರಿಗಳಿಗೆ ಜೀವನದ ಪಾಠ ಹೇಳಿಕೊಡುವ ಶಾಲೆಯೂ ಹೌದು.

ಮನುಷ್ಯ ತಾಂತ್ರಿಕವಾಗಿ ಸಾಕಷ್ಟು ಅಭಿವೃದ್ಧಿ ಸಾಧಿಸಿದ್ದಾನೆ. ಆದರೆ, ಎಲ್ಲಿ ಬೇಕಾದರೂ ಮನೆ ನಿರ್ಮಿಸುವ ಸಾಮರ್ಥ್ಯ ಆತನಿಗಿಲ್ಲ. ಇದಕ್ಕೆ ಪಕ್ಷಿಗಳು ಅಪವಾದ. ನೆಲದಿಂದ ಹಿಡಿದು ಸಾಗರ, ದ್ವೀಪ, ಪರ್ವತ, ಗಿರಿಶ್ರೇಣಿ, ಶೀತ ಪ್ರದೇಶದಲ್ಲಿಯೂ ಅವು ಗೂಡು ಕಟ್ಟುತ್ತವೆ.

## ಒಣಮರಗಳೇ ಆಸರೆ

ಕೆಲವು ಪಕ್ಷಿಗಳಿಗೆ ಗೂಡು ನಿರ್ಮಿಸಲು ಒಣಮರಗಳೇ ಆಧಾರ. ಜೀವ ಪರಿಸರದಲ್ಲಿ ಈ ಮರಗಳ ಪಾತ್ರ ಮಹತ್ವವಾದದ್ದು. ಅವುಗಳ ಪಾತ್ರವೂ ಸಂಕೀರ್ಣವಾದುದು. ಭಾರತದಲ್ಲಿ ಮರಕುಟಿಗ, ಕುಟ್ರ, ಗಿಳಿ, ಮಂಗಟ್ಟೆ, ಚಂದ್ರಮುಕುಟ, ಗೊರವಂಕ, ನೀಲಕಂಠ, ಗೂಬೆ, ಗಿಡುಗ, ಹದ್ದು ಸೇರಿದಂತೆ ನೂರಕ್ಕೂ ಹೆಚ್ಚು ಪಕ್ಷಿಗಳ ಜೀವವೈವಿಧ್ಯ ಕಾಪಾಡುವಲ್ಲಿ ಒಣಮರಗಳ ಪಾತ್ರ ನಿರ್ಣಾಯಕ. ಮರ ಕೊರೆದು, ಮರದ ತುತ್ತತುದಿಯಲ್ಲಿ ಅಥವಾ ಪೊಟರೆಯಲ್ಲಿ ಕಟ್ಟುವ ಗೂಡುಗಳು ಅವುಗಳ ಪಾಲಿಗೆ ಹೆಚ್ಚು ಸುರಕ್ಷಿತ.

ಒಣಮರಗಳು ಇಲ್ಲದಿದ್ದರೆ ಅವುಗಳ ಬದುಕು ಅಪೂರ್ಣ. ಆದರೆ, ವಿಶ್ವದ ಸಂಕೀರ್ಣ ಜೀವಜಾಲದ ಉಳಿವಿಗೆ ನೆರವಾಗುವ ಇಂತಹ ಮರಗಳು ಮಾನವನ ದೃಷ್ಟಿಯಲ್ಲಿ ನಿರುಪಯುಕ್ತ. ಉರುವಲು ಹಾಗೂ ಪೀಠೋಪಕರಣಗಳ ತಯಾರಿಕೆಗಾಗಿ ಪ್ರತಿವರ್ಷ ಕೋಟ್ಯಂತರ ಸಂಖ್ಯೆಯಲ್ಲಿ ಒಣಮರಗಳು ನೆಲಕ್ಕುರುಳುತ್ತಿವೆ. ಹಾಗಾಗಿ, ಇವುಗಳನ್ನು ಆಶ್ರಯಿಸಿದ ಪಕ್ಷಿಸಂಕುಲದ ಬದುಕು ಅಕ್ಷರಶಃ ದಿಕ್ಕುತಪ್ಪಿದೆ.

ಒಣಮರದಲ್ಲಿ ಗೂಡು ಕಟ್ಟುವ ಹಕ್ಕಿಗಳ ಹವಾಮಾನದ ಪರಿಜ್ಞಾನ ಅಚ್ಚರಿ ಮೂಡಿಸುತ್ತದೆ. ಮರದ ಆಯ್ಕೆಯಲ್ಲಿನ ಅವುಗಳ ಜಾಣ್ಮೆ ಬೆರಗು ಹುಟ್ಟಿಸುತ್ತದೆ. ಮರಕುಟಿಗ ಹಕ್ಕಿಗಳ